11. ವಿಷಯ : ಲೋಕಾಯುಕ್ತ ನೇಮಕಾತಿ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಕಳೆದ ಹತ್ತು ತಿಂಗಳಿನಿಂದ ನಮ್ಮ ರಾಜ್ಯಗಳಲ್ಲಿ ಲೋಕಾಯುಕ್ತ ನೇಮಕಾತಿ ಆಗಿಲ್ಲ. ಇವತ್ತು Lokayukta Act ಪ್ರಕಾರ ಲೋಕಾಯುಕ್ತರನ್ನು ಯಾವ ರೀತಿ appointment ಮಾಡಬೇಕೆಂದು ವಿಧಿ–ವಿಧಾನಗಳು specific ಆಗಿದೆ ಎಲ್ಲರಿಗೂ ಅರ್ಥವಾಗುತ್ತಿದೆ ಆ ಪ್ರಕಾರ ಇಲ್ಲಿಯವರೆಗೂ appoint ಆಗುತ್ತಾ ಬರುತ್ತಿದೆ. ಆದರೆ ಯಾವ ಕಾರಣಕ್ಕೋಸ್ಕರ ರಾಜ್ಯ ಸರ್ಕಾರ ಲೋಕಾಯುಕ್ತ appoint ಮಾಡಲು ಮುಂದಾಗುತ್ತಿಲ್ಲವೆನ್ನುವುದು ನಾವು ಹೇಳದೇ ಇದ್ದರೂ ಕೂಡ ಜನರಿಗೆ ಎಲ್ಲರಿಗೂ ಗೊತ್ತಿರತಕ್ಕಂಥದ್ದು, ಈಗಾಗಲೇ ಉಚ್ಚನ್ಯಾಯಾಲಯದಲ್ಲಿ ಸರ್ಕಾರಕ್ಕೆ ಎರಡು ಬಾರಿ ತಾಕಿತ್ತು ಮಾಡಿ ಲೋಕಾಯುಕ್ತರವರನ್ನು ಕೂಡಲೇ ನೇಮಕಾತಿ ಮಾಡತಕ್ಕಂಥ ಪ್ರಕ್ರಿಯೆ ಪ್ರಾರಂಭಿಸಬೇಕೆನ್ನುವುದನ್ನು ಮಾಡಿದ್ದಾರೆ. ಇವತ್ತು ಉಚ್ಚ ನ್ಯಾಯಾಲಯದಲ್ಲಿ ಅಷ್ಟಕ್ಕೇ ಬಿಡಲಿಲ್ಲ. ಕರ್ತವ್ಯ ಲೋಪ ಆಗುತ್ತಿದೆ. ಅದು ಆದರೆ ಇವತ್ತು ನೀವು constitutional ಆಗಿ ಕೆಲಸ ಮಾಡುತ್ತಿಲ್ಲವೆಂದು ನಾವು ರಾಜ್ಯಪಾಲರಿಗೆ ಕಾಗದ ಬರೆಯಬೇಕಾಗುತ್ತದೆ ಎನ್ನುವ ಮಾತನ್ನೂ ಹೇಳಿ, warn ಮಾಡಿದ ಹಿನ್ನೆಲೆಯಲ್ಲಿ ಇದುವರೆಗೂ ಕೂಡ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿಲ್ಲವೆಂದರೆ, ಯಾವ ಕಾರಣ್ಕಕೋಸ್ಕರ? ಈಗಾಗಲೇ ಆ ವಿಚಾರವು ಸುಪ್ರೀಂ ಕೋರ್ಟ್‌ನಲ್ಲಿ ಬರುತ್ತದೆ ಎಂದು Advocate General ರವರು ಒಂದು ಮಾತನ್ನು ಹೇಳಿದ್ದಾರೆ. ಇದಕ್ಕೆ ಸುಪ್ರೀಂ ಕೋರ್ಟ್‌ನ ಮಾರ್ಗದರ್ಶನ ಬೇಕೆ ? ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಕರಾರನ್ನು ಹಾಕಿದೆ ನೀವು ಜನರ ಕಣ್ಣನ್ನು ಮುಚ್ಚಿಸುವುದಕ್ಕೋಸ್ಕರ ಜನರ ಕಣ್ಣಿಗೆ ಮಣ್ಣೆರೆಚುವುದಕ್ಕೋಸ್ಕರ ಇದನ್ನು ಹಾಕಿದ್ದೀರಿ. ನೀವು ಹಾಕಿರುವಂತಹ ಅರ್ಜಿಗೆ ಸುಪ್ರೀಂ ಕೋರ್ಟ್ stay ಅನ್ನು ಕೊಟ್ಟಿದೆ? ಇದಕ್ಕೆ stay ಅನ್ನು ಕೊಟ್ಟಿಲ್ಲವಲ್ಲ ? ಸುಪ್ರೀಂ ಕೋರ್ಟ್ stay ಅನ್ನು ಕೊಡದೆ ಕೊಡದೆ ಇದ್ದಾಗ ನೀವು ಏತಕ್ಕಾಗಿ ಲೋಕಾಯುಕ್ತರನ್ನು ನೇಮಕ ಮಾಡಬಾರದು? ನಾನು ಬೆಳಿಗ್ಗೆ ಬಂದ ತಕ್ಷಣ ಬಸವೇಶ್ವರ ಸರ್ಕಲ್‌ನಲ್ಲಿ ಸಮಾಜದ ಕಳಕಳಿ ಇರುವಂತಹ ಪ್ರತಿಯೊಬ್ಬರು

ಕೂಡ ಬೋರ್ಡ್‌ನ್ನು ಹಿಡಿದುಕೊಂಡು ನಿಂತಿರುತ್ತಾರೆ. ಇವತ್ತು ಲೋಕಾಯ್ತುಕರನ್ನು ನೇಮಕ ಮಾಡಿ ಎಂದು ಹೇಳುವಂತಹ ಸಂದರ್ಭದಲ್ಲಿ ಸರ್ಕಾರವು ಏತಕ್ಕಾಗಿ ನೇಮಕಾತಿಯನ್ನು ಮಾಡುತ್ತಿಲ್ಲ ? ಈಗಾಗಲೇ ಉಚ್ಚ ನ್ಯಾಯಾಲಯದವರು ಸಾಕಷ್ಟು ಸಾರಿ ಈ ಬಗ್ಗೆ ಹೇಳಿದಾಗ ಇದುವರೆಗೂ ನೇಮಕಾತಿಯನ್ನು ಮಾಡುತ್ತಿಲ್ಲವೆಂದರೆ ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರಕ್ಕೆ ಒಂದೇ ಭಯ ಇರುವಂತಹದ್ದು ಎಂದರೆ ಲೋಕಾಯುಕ್ತದ ವರದಿಯನ್ನು ಲೋಕಾಯುಕ್ತರು ಬಂದರೆ ಇವರು ಬೆಳಿಗ್ಗೆ ಅದರ ಬಗ್ಗೆ ಉತ್ತರ ಕೊಡಲಿಲ್ಲವಲ್ಲಾ. ಇವರಿಗೆ ಆ ವರದಿಯ ಮೇಲೆ ಏತಕ್ಕಾಗಿ ಉತ್ತರವನ್ನು ಕೊಡಲಿಲ್ಲವೆಂದು ಗೊತ್ತಿದೆ. ಇದಕ್ಕೆ ಕಾರಣವಿಷ್ಟೆ. ಆ ವರದಿಯ ಬಗ್ಗೆ ಏನಾದರೂ ಪರಿಶೀಲನೆ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎನ್ನುವ ಒಂದೇ ಕಾರಣಕ್ಕಾಗಿ ಮಾಡುತ್ತಿದ್ದಾರೆ. ಲೋಕಾಯುಕ್ತದ ವರದಿಯನ್ನು ಅನಿವಾರ್ಯವಾಗಿ ಸರ್ಕಾರವು ಒಪ್ಪಲೇಬೇಕಾಗುತ್ತದೆಯೇ ವಿನಾ ಅದನ್ನು ಒಪ್ಪದೆ ವಿಧಿ ಇಲ್ಲ. ಆದರೆ ಲೋಕಾಯುಕ್ತರವರು ಇಲ್ಲದೆ ಇರುವುದು ಅವರಿಗೆ ಒಂದು ಕುಂಟು ನೆಪವಾಗಿದೆ. **"ಕಳ್ಳನಿಗೆ ಒಂದು ಪಿಳ್ಳೆ ನೆಪ"** ಎನ್ನುವ ರೀತಿಯಲ್ಲಿ ಈ ನೆಪವನ್ನು ಇಟ್ಟುಕೊಂಡು ಇವತ್ತು ಅದನ್ನು ಮುಂದೆ ಮಾಡುತ್ತಿದ್ದಾರೆ. ಇದು ಸರಿಯಿಲ್ಲ. ನೀವು ಜನಗಳ ಭಾವನೆಗಳಿಗೆ ಇವತ್ತು ಎಲ್ಲೋ ಒಂದು ಕಡೆಗೆ ಸರ್ಕಾರವು ಅನುಮಾನದಿಂದ ನೋಡುವಂತಹ ರೀತಿಯಲ್ಲಿ ಆಗಿದೆ. ಲೋಕಾಯುಕ್ತರವರು ಬಂದರೆ ಇನ್ನು ಬಹಳಷ್ಟು ಜನರು ಜೈಲಿಗೆ ಹೋಗುತ್ತಾರೆನ್ನುವಂತಹ ಮಾತು ಜನಜನಿತವಾಗಿರುವುದು. ದಯಮಾಡಿ ಇದಕ್ಕೆ ಆಸ್ಪದವನ್ನು ಕೊಡಬಾರದು ಎನ್ನುವಂತಹ ರೀತಿಯಲ್ಲಿ ಹೇಳುತ್ತಿದ್ದೇನೆ. ಅತ್ಯಂತ ಪ್ರಾಮಾಣಿಕವಾದಂತಹ ರೀತಿಯಲ್ಲಿ ಇರುವಂತಹ Parliamentary Affairs & Law Minister ರವರು ಆ ರೀತಿಯಾಗಿ ತೀರ್ಮಾನ ಮಾಡಲೇಬೇಕೆಂದು ಹೇಳುತ್ತೇನೆ. ಲೋಕಾಯುಕ್ತರ ನೇಮಕದ ಪ್ರಕ್ರಿಯೆಯನ್ನು ಪ್ರಾರಂಭಿಸಿ ಇನ್ನು ಹತ್ತು ದಿವಸದಲ್ಲಿ ಲೋಕಾಯುಕ್ತದವರನ್ನು ನೇಮಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಹಿರಿಯರಾದ ಮಾನ್ಯ ಪ್ರತಿಪಕ್ಷದ ಉಪನಾಯಕರಾದ ಶ್ರೀ ಟಿ.ಬಿ. ಜಯಚಂದ್ರರವರು ಕಾನೂನನ್ನು ಬಲ್ಲವರಾಗಿದ್ದಾರೆ ಅವರು ಈ ಹಿಂದೆ ಸಚಿವರಾಗಿ ಕೆಲಸವನ್ನು ಮಾಡಿದ್ದಾರೆ ಮತ್ತು ಅತ್ಯಂತ ಅನುಭವ ಇರುವವರು ಆಗಿದ್ದಾರೆ. ಅವರು ವಿಶೇಷವಾಗಿ ಲೋಕಾಯುಕ್ತರ ನೇಮಕದ ಬಗ್ಗೆ ಕುರಿತು ಮಾತನಾಡುತ್ತಿರುವಾಗ ಸತ್ಯದಿಂದ ಕೂಡಿರುವಂತಹ ಮಾತುಗಳು ಬರುತ್ತದೆ ಎಂದು ನಾವೆಲ್ಲರೂ ಅಂದುಕೊಂಡಿದ್ದೆವು. "ಕಳ್ಳನಿಗೊಂದು ಪಿಳ್ಳೆ ನೆಪ, ಬೂಟಾಟಿಕೆ" ಏನೋ ಒಂದು ದುರುದ್ದೇಶ ಇಟ್ಟುಕೊಂಡು ಇವೆಲ್ಲಾ ಮಾತುಗಳು ಮಾನ್ಯ ಜಯಚಂದ್ರರವರು ಮಾತನಾಡುವಾಗಲೂ ಕೂಡ ಬಂದಿದೆ. ಆದರಿಂದ ನನಗೆ ಬಹಳ ಆಶ್ಚರ್ಯವಾಗಿದೆ. ಸಾಮಾನ್ಯವಾಗಿ ಬೇರೆ ಯಾರಾದರೂ ಮಾತನಾಡಿದ್ದರೆ ನಾನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಹಿಂದೆ ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ನಿವೃತ್ತಿ ಹೊಂದಿದರು. ಅದು ಆದ ತಕ್ಷಣ ಈ ಬಗ್ಗೆ ಮಾನ್ಯ ಜಯಚಂದ್ರರವರಿಗೆ ನೆನಪು ಇರಬಹುದು. ಅವರಿಗೆ ನೆನಪು ಇಲ್ಲದೆ ಇದ್ದರೆ ನಾನು ಅವರ ನೆನಪಿಗೆ ತಂದುಕೊಡುವ ಬಗ್ಗೆ ಪ್ರಯತ್ನ ಪಡುತ್ತೇನೆ. ಹಿಂದೆ ಎಲ್ಲಾ ಸರ್ಕಾರಗಳು ಏನು ಪ್ರಕ್ರಿಯೆಯನ್ನು ಮಾಡಿತ್ತೋ ಅದೇ ಪ್ರಕ್ರಿಯೆಗಳನ್ನು ಅನುಸರಿಸಿ ನಾವು ನ್ಯಾಯಮೂರ್ತಿ ಶ್ರೀ ಶಿವರಾಜ್ ಪಾಟೀಲ್‌ರವರನ್ನು ನಮ್ಮ ಲೋಕಾಯುಕ್ತರನ್ನಾಗಿ ನೇಮಿಸಿದ್ದೆವು. ಅವರು ಕಾರ್ಯವನ್ನು ನಿರ್ವಹಿಸುವುದಕ್ಕೆ ಪ್ರಾರಂಭ ಮಾಡಿದ್ದರು. ದುರಂತವೇನೆಂದರೆ ಅವರ ಬಗ್ಗೆ ಏನೋ ಒಂದು ದೂರು allegation ಬಂದು ಅದಕ್ಕೆ ವ್ಯಾಪಕವಾಗಿ ಪ್ರಚಾರ ಸಿಕ್ಕಿ ಅವರು ಬಹಳ ನೊಂದುಕೊಂಡು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟರು. ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಕಾಣಬಹುದಾದ ಒಬ್ಬ ಉತ್ತಮ ಲೋಕಾಯುಕ್ತರನ್ನು ಕಳೆದುಕೊಂಡೆವು. ಏಕೆಂದರೆ ಶ್ರೀ ಶಿವರಾಜ್ ಪಾಟೀಲ್‌ರವರು ನ್ಯಾಯಮೂರ್ತಿ ಸ್ಥಾನದಿಂದ ಮಾಡಿದ ಕೆಲಸದ ಬಗ್ಗೆ ಯಾರದು ಕೂಡ ಎರಡನೇ ಮಾತಿಲ್ಲ. ಅವರು ಅತ್ಯಂತ ಒಬ್ಬ ಸಜ್ಜನ,

ಮೇಧಾವಿ ಬಹಳ ಒಳ್ಳೇಯ ಹೆಸರನ್ನು ಸಹ ತೆಗೆದುಕೊಂಡಿದ್ದಾರೆ ಇದಾದ ನಂತರ ಮತ್ತೆ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡಿದೆವು. ನ್ಯಾಯಮೂರ್ತಿ ಶ್ರೀ ಬನ್ನೂರ್ ಮಠ್‌ರವರನ್ನು ನೇಮಕ ಮಾಡುವ ಸಲಹೆಯನ್ನು ಕಳುಹಿಸಿದ್ದೆವು. ಅದು ಎಲ್ಲಿ ಎಷ್ಟು ದಿವಸ ನೆನಗುದಿಗೆ ಬಿದ್ದಿತ್ತು ಅದೇನು ಕಾರಣ ಎನ್ನವುದಕ್ಕೆ ಹೇಳುವುದಕ್ಕೆ ಹೋಗುವುದಿಲ್ಲವೆಂದು ಅದು ನೆನಗುದಿಗೆ ಬಿದ್ದಿತ್ತು. ಕೊನೆಗೆ ಅವರ ಹೆಸರನ್ನು ನಿರಾಕರಿಸಿದರು. Lokayukta Act ನಲ್ಲಿ ಏನು ಇದೆ. ಕಾನೂನಿನಲ್ಲಿ ಏನು ಇದೆ ಲೋಕಾಯುಕ್ತರ ನೇಮಕದ ಕುರಿತು, ಆ ಕುರಿತಂತೆ ನಾವು ಮಾಡಿದ ಸರ್ಕಾರದ ಒಂದು ಅಧಿಕಾರದ ವ್ಯಾಪ್ತಿಯ ಅಡಿಯಲ್ಲಿ ಮಾಡಿದ ನೇಮಕಾತಿಯನ್ನು ನಿರಾಕರಿಸುವ ಸ್ಥಿತಿಗೆ ಬಂದಿರುವುದನ್ನು ನಾವು ನೋಡಿದ್ದೇವೆ. ಬಹುಶಃ ಬನ್ನೂರ್ ಮಠ್‌ರವರು ಸಹ ಈ ಒಂದು ಸ್ಥಾನ ಬೇಕಿಲ್ಲವೆಂದು ಹೇಳಿ ರಾಜೀನಾಮೆಯನ್ನು ಕೊಟ್ಟರು. ಆದಾದ ಮೇಲೆ ನಾವು ಪ್ರಕ್ರಿಯೆಯನ್ನು ಪ್ರಾರಂಭ ಮಾಡಬೇಕಾಗಿತ್ತು. ಇವರ ಮಧ್ಯೆ ಉಪ ಲೋಕಾಯುಕ್ತರ ಒಂದು ಪ್ರಸಂಗ ಜರುಗಿರುವುದು ತಮಗೆ ಗೊತ್ತಿದೆ. ಉಪ ಲೋಕಾಯುಕ್ತರ ನೇಮಕಾತಿ ಆಯಿತು. ಇದಾದ ನಂತರ ಅವರು ಕಾರ್ಯನಿರ್ವಹಿಸುತ್ತಿದ್ದಾಗ ಸನ್ಮಾನ್ಯ ಉಚ್ಚ ನ್ಯಾಯಾಲಯದಿಂದ ಒಂದು ತೀರ್ಪು ಬಂದ ಹಿನ್ನೆಲೆಯಲ್ಲಿ ಆ ಒಂದು ಸ್ಥಾನಕ್ಕೂ ಕೂಡ ಏನು ಬಂದೊದಗಿದೆ ಎಂದು ತಮಗೆ ಗೊತ್ತಾಗಿದೆ. ಇವತ್ತು ಮೂಲಭೂತ ಪ್ರಶ್ನೆ ಬಂದಿರುವುದು ಲೋಕಾಯುಕ್ತರ ನೇಮಕಾತಿಯ ವಿಚಾರದಲ್ಲಿ ಸರ್ಕಾರ ಮೀನಮೇಷ ಎಣಿಸುತ್ತಿಲ್ಲ. ಆ ನೇಮಕಾತಿ ಪ್ರಕ್ರಿಯೆ ಯಾವ ರೀತಿಯಾಗಿ ನಡೆಯಬೇಕು ಎನ್ನುವಂತಹದ್ದು ಪ್ರಶ್ನೆ ಹಿಂದೆ ನೀವು ಸರ್ಕಾರದಲ್ಲಿ ಇದ್ದಿರಿ. ಇವತ್ತು ನಾವು ಅಧಿಕಾರದಲ್ಲಿದ್ದೇವೆ. ಬಹಳ ಹಿಂದೆ ಮಾನ್ಯ ರಾಮಕೃಷ್ಣ ಹೆಗ್ಡೆಯವರ ಸರ್ಕಾರದಲ್ಲಿ ಇದು ಪ್ರಾರಂಭವಾಗಿದ್ದು ಅವತ್ತಿನಿಂದ ಈ Primacy of Appointment ಅನ್ನುವುದು. ಲೋಕಾಯುಕ್ತದಲ್ಲಿ ಬಹಳ ಮುಖ್ಯ. ಯಾವ ರೀತಿಯಾಗಿ ನೇಮಕ ಮಾಡುವುದು ಎನ್ನುವಂತಹ ಪದ್ದತಿ ಇದೆ. ವಿರೋಧ ಪಕ್ಷದ ನಾಯಕರು, ಎರಡೂ ಮನೆಯ ನಾಯಕರು, ಮೇಲ್ಮನೆ ಸಭಾಪತಿಗಳು, ಕೆಳಮನೆಯ ಸಭಾಧ್ಯಕ್ಷರು, ನ್ಯಾಯಮೂರ್ತಿಗಳು

ಇವರೆಲ್ಲರ ಅಭಿಪ್ರಾಯವನ್ನು ಸಂಗ್ರಹಿಸಿ in conusltation with ಎಂದು ಇರುವುದು. ಎಲ್ಲೂ in concurrence ಎಂದು ಇಲ್ಲ. ನಾವು ಮಾಡಿರುವುದರಲ್ಲಿ ಲೋಪದೋಷಗಳನ್ನು ಕಂಡುಹಿಡಿಯುವುದು ಇರಬಹುದು. ಲೋಪದೋಷ ಇರಬಹುದು. ನಾವು ಅದನ್ನು ಮಾಡಿದ್ದೇವೆ. ಇವತ್ತು ಉಪಲೋಕಾಯ್ತುಕರ ನೇಮಕಾತಿ ಕುರಿತು ಸನ್ಮಾನ್ಯ ಉಚ್ಚ ನ್ಯಾಯಾಲಯದವರು ಒಂದು ತೀರ್ಪನ್ನು ಕೊಟ್ಟಿದ್ದಾರೆ. ಆ ತೀರ್ಪಿನ ಹಿನ್ನೆಲೆಯಲ್ಲಿ ಒಟ್ಟು ನೇಮಕಾತಿಯ ಪ್ರಕ್ರಿಯೆಯಲ್ಲಿ ಸರ್ಕಾರದ ಪಾತ್ರ executive ಪಾತ್ರ ಇದರ ಬಗ್ಗೆಯೆ ಒಂದು question mark ಬಂದಿರುವಂತಹ ಹಿನ್ನೆಲೆಯಲ್ಲಿ ನಾವು ಸುಪ್ರೀಂ ಕೋರ್ಟ್‌ಗೆ ಹೋಗಿದ್ದೇವೆ. ಅದನ್ನು ಯಾರೂ ಕೂಡ ತಡೆಹಿಡಿಯುವುದಕ್ಕಾಗುವುದಿಲ್ಲ. ಸುಪ್ರೀಂ ಕೋರ್ಟಗೆ ಹೋಗುವುದು ಒಂದು ಹಕ್ಕು. ಆದರೆ ತಾವು ಹೇಳಿರುವ ಹಾಗೆ ನಿನ್ನೆ ರಾಜ್ಯದ ಗೌರವಾನ್ವಿತ ಉಚ್ಚ ನ್ಯಾಯಾಲಯವು ಮತ್ತೊಂದು ಸಲ ಈ ವಿಚಾರವನ್ನು ಪ್ರಸ್ತಾಪಿಸಿ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಬಗ್ಗೆ ಸರ್ಕಾರವು ನೋಡಿದೆ. ಸರ್ಕಾರ ಅದನ್ನು ಗಂಭೀರವಾಗಿ ಏನು ನ್ಯಾಯಾಲಯವು ಸೂಚನೆಯನ್ನು ಕೊಟ್ಟಿದೆ ನ್ಯಾಯಾಲಯವು ವ್ಯಕ್ತಪಡಿಸಿದೆ ಅದನ್ನು ಕೂಡ ನಾವು ಗಂಭೀರವಾಗಿ ನೋಡಿದ್ದೇವೆ. ಈ ಹಿನ್ನಲೆಯಲ್ಲಿ ಸರ್ಕಾರದಿಂದ ಮುಂದಿನ ಕ್ರಮದ ಬಗ್ಗೆ ಯೋಚಿಸುತ್ತೇವೆ. ಮುಂದೆ ಸರ್ಕಾರ ಮಾಡುವವರು ಈ ಬಗ್ಗೆ ತಾವು ಕೂಡ ಅರ್ಥ ಮಾಡಿಕೊಳ್ಳಬೇಕು. Lokayukta Act ಗೆ ನಾವು ತಿದ್ದುಪಡಿಯನ್ನು ಮಾಡದೆ ಈ ಒಂದು ಪ್ರಕ್ರಿಯೆಯನ್ನು ವಿಶೇಷವಾಗಿ ಉಪ ಲೋಕಾಯುಕ್ತ ನೇಮಕಾತಿಯಲ್ಲಿ ಬಂದಿರುವ ತೀರ್ಪಿನ ಹಿನ್ನೆಲೆಯಲ್ಲಿ ಯಾವ ರೀತಿಯಾಗಿ ಮಾಡಬೇಕೆಂದು ಒಂದು ಜಿಜ್ಞಾಸೆ ಇದೆ. ಮತ್ತೊಂದು ಸಲ ಈ ಬಗ್ಗೆ ಸ್ಪಷ್ಟವಾಗಿ ಹೇಳುತ್ತೇನೆ. ಯಾವುದೊ ಒಂದು ದುರುದ್ದೇಶ ಇಟ್ಟುಕೊಂಡು ಅಥವಾ ಯಾವುದೋ ಒಂದು ಉದ್ದೇಶ ಇಟ್ಟುಕೊಂಡು ನಾವು ನೇಮಕಾತಿ ಮಾಡುತ್ತಿಲ್ಲವೆನ್ನುವುದು. ಸತ್ಯಕ್ಕೆ ಬಹಳ ದೂರವಾದ ಮಾತು. ನಾವು ಹಿಂದೆ ಎರಡು ಬಾರಿ ನೇಮಕಾತಿ ಪ್ರಕ್ರಿಯೆ ಮಾಡಿದ್ದೇವೆ. ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಮತ್ತು ನ್ಯಾಯಮೂರ್ತಿ ಬನ್ನೂರ್ ಮಠ್‌ರವರು ನೇಮಕ ಮಾಡಿದ್ದೇವು. ಈ

ಬಾರಿಯೂ ಕೂಡ ಈ ಸುಪ್ರೀಂ ಕೋರ್ಟ್‌ನ ಆದೇಶವನ್ನು ನಾವು ಎದುರು ನೋಡುತ್ತಿದ್ದೇವೆ. ನಮ್ಮ ಮುಂದಿನ ಹೆಜ್ಜೆ ಏನಿರಬೇಕೆಂಬ ಬಗ್ಗೆ ಸರ್ಕಾರವು ಇಷ್ಟರಲ್ಲಿಯೇ ತೀರ್ಮಾನ ಮಾಡಿ ಘೋಷಿಸುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಅವರು ಹೇಳಿರುವುದೆಲ್ಲವನ್ನೂ ಕೂಡ ನೀವು ಕೊಟ್ಟಂತಹ ಸಲಹೆಗಳನ್ನು ಇದೇ ವಾದವನ್ನು Advocate General ರವರು ಉಚ್ಚ ನ್ಯಾಯಾಲಯದ ಮುಂದೆ ವಾದವನ್ನು ಮಂಡಿಸಿದಾಗಲೂ ಕೂಡ ಉಚ್ಚ ನ್ಯಾಯಾಲಯದವರು ನಿಮ್ಮ ವಾದವನ್ನು ಅವರನ್ನು ಒಪ್ಪಿಲ್ಲ. ಅವರು ಏನು ಹೇಳಿದ್ದಾರೆಂದರೆ, ಇವತ್ತು ಹೈಕೋರ್ಟಿನಲ್ಲಿರುವುದಕ್ಕೂ ಇದಕ್ಕೂ ನೀವು ತಾಳೆ ಮಾಡಬೇಡಿ. ಈ ಪ್ರಕ್ರಿಯೆ ಪ್ರಾರಂಭಿಸಿ ಎಂದು ultimatum ಕೊಟ್ಟಿದ್ದರಲ್ಲಾ It is a warming to the government.

ಶ್ರೀ ಎಸ್. ಸುರೇಶ್ ಕುಮಾರ್ : ನೀವು ಹೇಳಿರುವುದು ನಿಜ. ಕೇಂದ್ರದಲ್ಲಿ ನಾವು ಸುಪ್ರೀಂ ಕೋರ್ಟಿಗೆ ಹೋಗಿದ್ದೇವೆ. ಸುಪ್ರೀಂ ಕೋರ್ಟ್ ತಡೆಯಾಜ್ಞೆಯನ್ನು ನೀಡಿಲ್ಲ. ಅದೇ ಒಂದು ನೆಪ ಅಲ್ಲ. ಇಲ್ಲಿ ಪ್ರಶ್ನೆ ಇರುವುದು appointment ಪ್ರಕ್ರಿಯೆ ಯಾವ ರೀತಿಯಾಗಿ ಇರಬೇಕು. ನಾನು ಹೇಳುತ್ತಿರುವುದು Primacy of appointment ಎನ್ನುವುದು ಇದರ ಬಗ್ಗೆ ಒಂದು ಸಣ್ಣ ಜಿಜ್ಞಾಸೆ ನಡೆಯುತ್ತಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ನಿನ್ನೆ ಗೌರವಾನ್ವಿತ ನ್ಯಾಯಮೂರ್ತಿಗಳು ಉಚ್ಚ ನ್ಯಾಯಾಲಯದಲ್ಲಿ ಕೊಟ್ಟ ತೀರ್ಪಿನ ಹಿನ್ನೆಲೆಯಲ್ಲಿ ನಾವು ಮುಂದಿನ ಪ್ರಕ್ರಿಯೆ ಬಗ್ಗೆ ಯೋಚನೆಯನ್ನು ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಸಾರ್ವಜನಿಕರು ಕೂಡ agitate ಮಾಡುತ್ತಿದ್ದಾರೆ. ಅವರು ಚಳುವಳಿ ಮಾಡುವುದಕ್ಕೆ ಹೊರಟ್ಟಿದ್ದಾರೆ. ಉಪವಾಸ ಸತ್ಯಾಗ್ರಹ ಮಾಡುತ್ತೇವೆಂದು ಈಗಾಗಲೇ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಹಿಂದಿನ ಲೋಕಾಯುಕ್ತ ನ್ಯಾಯಮೂರ್ತಿಗಳಾಗಿದ್ದ ಸಂತೋಷ್ ಹೆಗಡೆಯವರು, ಸ್ವಾತಂತ್ರ್ಯ

ಹೋರಾಟಗಾರರಾದ ಶ್ರೀ ದೊರೆಸ್ವಾಮಿ ರವರೆಲ್ಲರು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಹೈಕೋರ್ಟ್‌ನವರು ಎರಡು ಸಾರಿ ನೀವು ಏತಕ್ಕಾಗಿ ನೇಮಕಾತಿ ಮಾಡುತ್ತಿಲ್ಲವೆಂದು ಇವರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ನಿನ್ನೆ ಒಂದು ರೀತಿ ಬಹಳ ಕಠಿಣವಾದ ಪದಗಳನ್ನು ಬಳಸಿ ಛೀಮಾರಿ ಹಾಕುವ ರೀತಿಯಲ್ಲಿ ಹೇಳಿದ್ದಾರೆ. ನೀವು ಸುಪ್ರೀಂ ಕೋರ್ಟ್‌ನಲ್ಲಿದೆ. clarification ಕೇಳಿದ್ದೇವೆ. ಚಂದ್ರಶೇಖರಯ್ಯನವರು ಉಪ ಲೋಕಾಯುಕ್ತರಾಗಿದ್ದಾಗ ಅದನ್ನು ರದ್ದು ಮಾಡಿದ್ದು ಉಚ್ಚ ನ್ಯಾಯಾಲಯ, ಅದರ ಬಗ್ಗೆ ಅಫೀಲ್ ಹೋಗಿದ್ದೇವೆ ಎಂದು ಹೇಳುತ್ತಾ ಕುಳಿತರೆ ಯಾವಾಗ ಮಾಡುವಿರಿ? ದೇಶದಲ್ಲಿ ಒಂದು ಕಡೆ ಲೋಕಪಾಲ್ ಬಿಲ್ ಪಾಸ್ ಆಗಬೇಕೆಂದು ಒತ್ತಾಯ ನಡಯುತ್ತಿದೆ. ಇನ್ನೊಂದು ಕಡೆ ರಾಜ್ಯದಲ್ಲಿ ಲೋಕಾಯುಕ್ತರನ್ನು ನೇಮಕ ಮಾಡದೇ ಹೋದರೆ ಜನ ಎಲ್ಲಾ ಏನು ಹೇಳುತ್ತಾರೆ. ಸರ್ಕಾರದ ಬಗ್ಗೆ ನಮ್ಮ ಬಗ್ಗೆ ಎಲ್ಲಿಯವರೆಗೆ ಹೋಗಿದ್ದಾರೆಂದರೆ ವಿರೋಧ ಪಕ್ಷದವರು ಕೂಡ ಸುಮ್ಮನೆ ಕುಳಿತಿದ್ದಾರೆ ಇದನ್ನು ಕೇಳುತ್ತಿಲ್ಲ ಎನ್ನುವ ಮಟ್ಟಿಗೆ ಜನ ಮಾತನಾಡಿಲಿಕ್ಕೆ ಪ್ರಾರಂಭ ಮಾಡಿದ್ದಾರೆ. ನನಗೆ ಗೊತ್ತಿರುವ ಮಟ್ಟಿಗೆ ನೀವು ಸುಪ್ರೀಂ ಕೋರ್ಟ್‌ನಲ್ಲಿರತಕ್ಕಂಥ ಪೆಟಿಷನ್‌ಗೂ ಇಲ್ಲಿ ಲೋಕಾಯುಕ್ತ ನೇಮಕ ಮಾಡತಕ್ಕಂಥ ಪ್ರಕ್ರಿಯೆಗೂ ಸಂಬಂಧ ಇಲ್ಲ. ಪ್ರಕ್ರಿಯೆ ಮಾಡಲಿಕ್ಕೆ ಕೂಡಲೇ ಕ್ರಮ ಕೈಗೊಳ್ಳಿ. ನಿನ್ನೆ ಉಚ್ಚ ನ್ಯಾಯಾಲಯದಲ್ಲಿ ಹೇಳಿದ್ದಾರೆ. ಪ್ರಾರಂಭ ಮಾಡಿ. ಅಲ್ಲಿ ಏನು clarification ಬರುತ್ತದೆ ಅದನ್ನು ನೋಡೋಣ ಆಮೇಲೆ Act ಗೆ ತಿದ್ದುಪಡಿ ಮಾಡಬೇಕೇ ಏನು ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡೋಣ. ನೇಮಕ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರು, ಮಾನ್ಯ ಜಯಚಂದ್ರರವರು ಲೋಕಾಯುಕ್ತ ನೇಮಕದ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಸುರೇಶ್ ಕುಮಾರ್‌ರವರು ಈಗಾಗಲೇ ಅದಕ್ಕೆ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಕರ್ನಾಟಕ ಸರ್ವೋಚ್ಚ ನ್ಯಾಯಾಲಯದಲ್ಲಿ ಈಗಾಗಲೇ ಇನ್ನೂ ಪ್ರಕರಣ ಪೆಂಡಿಂಗ್ ಇದೆ. ಅಲ್ಲಿ ಕಳೆದ ವಾರ ನಮ್ಮ ಮುಖ್ಯ ನ್ಯಾಯಾಧೀಶರು

ಕೆಲವೊಂದು observation ಮಾಡಿದರು. ನಿನ್ನೆಯೂ ಪ್ರಕರಣ ಬಂದಿತ್ತು. ಅಲ್ಲಿಯೂ ನಮ್ಮ ರಾಜ್ಯ ಸರ್ಕಾರದ ನಿಲುವನ್ನು ನಾವು ತಿಳಿಸಿದ್ದೇವೆ. ಈ ಲೋಕಾಯುಕ್ತ ನೇಮಕ ಮಾಡುವ ಬಗ್ಗೆ ನಾವು ಬದ್ಧರಿದ್ದೇವೆ. ಅದಕ್ಕೆ ಬೇರೆ ಪ್ರಶ್ನೆಯೇ ಇಲ್ಲ. ಕೆಲವೊಂದು ಕಾನೂನಿನ ಸೂಕ್ಷ್ಮತೆಗಳು ಅಡಕವಾಗಿದೆ. ಜಸ್ಟೀಸ್ ಕುಮಾರ್‌ರವರ ಒಂದು ಜಡ್ಜ್‌ಮೆಂಟ್ ಆದಮೇಲೆ ಅಲ್ಲಿ ಕೆಲವೊಂದು directions ಕೊಟ್ಟರು. ಯಾವ ರೀತಿ procedure follow ಮಾಡಬೇಕು ಎನ್ನುವಂಥದ್ದು, ಲೋಕಾಯುಕ್ತ, ಉಪ ಲೋಕಾಯುಕ್ತ ನೇಮಕದ ಬಗ್ಗೆ ಏನು procedure follow ಮಾಡಬೇಕೆಂಬ ಬಗ್ಗೆ ಹಲವಾರು ವಿಚಾರಗಳನ್ನು ಹೇಳಿದರು. ಅದರ ಮೇಲೆ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರ ಅಪೀಲ್ ಮಾಡಿ special petition file ಮಾಡಿದೆ. ಅದು ಆಗಸ್ಟ್ ಮೊದಲನೆ ವಾರದಲ್ಲಿ hearing ಬರುತ್ತಿದೆ. ಈ ಎಲ್ಲಾ ವಿಷಯಗಳನ್ನು ಸಹಿತ ನಮ್ಮ Advocate General ನಿನ್ನೆ ಕೋರ್ಟಿನ ಮುಂದೆ ಹೇಳಿದ್ದಾರೆ. ಈಗ ಮತ್ತೆ ನಾಳೆ hearing ಇದೆ. ಈಗಾಗಲೇ ನಮ್ಮ ಸರ್ಕಾರದ ನಿಲುವು ಏನೆಂಬುದನ್ನು ಹೇಳಿದ್ದೇವೆ. ನಾಳೆ ಮತ್ತೆ ಪ್ರಕರಣ ಇದೆ. ನಾಳೆ ಮತ್ತೆ further hearing ಇದೆ. ಅಲ್ಲಿಯೂ ನಮ್ಮ ವಿಚಾರಗಳನ್ನು ಹೇಳುತ್ತೇವೆ. ಇವತ್ತು ಕರ್ನಾಟಕ ಹೈಕೋರ್ಟ್ ಇರಬಹುದು. ಸುಪ್ರೀಂ ಕೋರ್ಟ್ ಇದೆ. ಕೊನೆಯದಾಗಿ ಅವರೇನು ಫೈನಲ್ ಆಗಿ ನಿರ್ಣಯ ಕೊಡುತ್ತಾರೆ. ಅದಕ್ಕೆ ನಾವು ಬದ್ಧರಿರುತ್ತೇವೆ. ಹೀಗಾಗಿ ಆ ಒಂದು ಕಾನೂನಿನ ಸೂಕ್ಷ್ಮತೆ ಇರುವುದರಿಂದ, ಇದರ ಬಗ್ಗೆ ನಾವು ಯಾವುದೇ ಒಂದು ದುರುದ್ದೇಶದಿಂದ ಡಿಲೇ ಮಾಡಬೇಕು ಎಂಬ ಉದ್ದೇಶ ಯಾವುದೂ ಇಲ್ಲ. ಇಲ್ಲಿ ಮೊದಲ procedure ಇತ್ತು. ಇವತ್ತೇನು procedure ಇದೆ ಇವೆಲ್ಲಾ ಒಂದಿಷ್ಟು ತೊಡಕುಗಳು ಇವೆ. ಈಗ ಆ ದೃಷ್ಟಿಯಿಂದ ಒಂದು ಸ್ಪಷ್ಟೀಕರಣವನ್ನು ತೆಗೆದುಕೊಂಡು ನಾವು definite ಆಗಿ process ಮಾಡೇ ಮಾಡುತ್ತೇವೆ. ನಾಳೆ ಮತ್ತೊಂದು hearing ಬರುತ್ತಿದೆ. Final ಆಗಿ ನಾವೊಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. Definite ಆಗಿ ನಿಮ್ಮ ಭಾವನೆಗಳನ್ನು ನಾವು ಸ್ಪಂದನ ಮಾಡುತ್ತೇವೆ. ನಿಮ್ಮ

ಅಭಿಪ್ರಾಯ ಹಾಗೂ ಸಾರ್ವಜನಿಕ ಅಭಿಪ್ರಾಯಕ್ಕೆ definitely ಸರ್ಕಾರ ಸ್ಪಂದಿಸುತ್ತದೆ.

ಶ್ರೀ ಸಿದ್ದರಾಮಯ್ಯ : ಸಾರ್ವಜನಿಕರ ಅಭಿಪ್ರಾಯ ನಮ್ಮ ವಿರುದ್ಧ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಸಾರ್ವಜನಿಕ ಅಭಿಪ್ರಾಯ ಏನಿದೆ. ಲೋಕಾಯುಕ್ತ ನೇಮಕ ಆದಷ್ಟು ಬೇಗನೆ ಆಗಬೇಕೆಂದಿದೆ. ನೀವೂ ಸಹ ಆ ಅಭಿಪ್ರಾಯಕ್ಕೆ ತಕ್ಕಂತೆ insist ಮಾಡುತ್ತಿದ್ದೀರಿ. ಅದನ್ನು ನಾವು ಒಪ್ಪುತ್ತಿದ್ದೇನೆ. ಅದಕ್ಕೆ ಕೋರ್ಟ್‌ನಲ್ಲಿ ಪ್ರಕರಣಗಳಿವೆ. ಈ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಂಡು ನಾಳೆ ಏನು ನಡೆಯುತ್ತದೆ ಅದರ ಮೇಲೆ ನಾವು ಮುಂದಿನ Process definitely ಮಾಡುತ್ತೇವೆ.

ಅಧ್ಯಕ್ಷರು : ಈಗ ಚಿಕ್ಕಣ್ಣನವರು ಹಕ್ಕುಚ್ಯುತಿ ಬಗ್ಗೆ ಮಾತನಾಡಿ.

12. ವಿಷಯ : ಮಾನ್ಯ ಸದಸ್ಯರಾದ ಶ್ರೀ ಚಿಕ್ಕಣ್ಣನವರು ಹಕ್ಕುಚ್ಯುತಿಯಾಗಿರುವ ಬಗ್ಗೆ.

ಶ್ರೀ ಚಿಕ್ಕಣ್ಣ (ಹೆಗ್ಗಡದೇವನ ಕೋಟೆ) : ಸನ್ಮಾನ್ಯ ಅಧ್ಯಕ್ಷರೆ, ನನಗೆ ಹಕ್ಕುಚ್ಯುತಿ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಈಗಾಗಲೇ 27ನೇ ತಾರೀಖು ಪತ್ರಿಕೆಯಲ್ಲಿ ಪ್ರಕಟಣೆಯಾಗಿದೆ. ದಿನಾಂಕ 21 ರಂದು ಎಲ್ಲಾ ಟಿವಿ ಚಾನೆಲ್, ಮಾಧ್ಯಮಗಳಲ್ಲಿ ಬಿತ್ತರಿಸಿದ್ದಾರೆ. ನಾನು ದಿನಾಂಕ 21-7-2012 ರಂದು ಶನಿವಾರ Divisional Urban Development Cell ಕಚೇರಿಗೆ ಹೋಗಿದ್ದೆ 18, 19, 20ನೇ ತಾರೀಖುಗಳಂದು ನಾನು ಮಾಡಿದಂಥ ಕರೆಯನ್ನು ತಾವು ಏಕೆ ಸ್ವೀಕರಿಸಿಲಿಲ್ಲ. ತಾವು ಏಕೆ ಮಾತನಾಡಲಿಲ್ಲವೆಂದು ಕೇಳುವುದಕ್ಕೆ ಹೋದ ಸಂದರ್ಭದಲ್ಲಿ ಅವರು ನನ್ನ ಬಗ್ಗೆ ಬಹಳ ಆಪಾದನೆ ಮಾಡಿದ್ದಾರೆ. ಅದನ್ನು ಪತ್ರಿಕೆಯಲ್ಲಿ ಕೂಡ ಹೇಳಿದ್ದಾರೆ. ಏನೆಂದರೆ ಇವರು ಕುಡಿದು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ನನಗೆ ನೆಮ್ಮದಿ ಕೆಡಿಸಿದ್ದಾರೆ. ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಇವರ ಬಗ್ಗೆ ಸಾರ್ವಜನಿಕರಲ್ಲಿ ಕೂಡ ಕೆಟ್ಟ ಅಭಿಪ್ರಾಯ ಇದೆ. ಅದನ್ನು ತಾವೆಲ್ಲರೂ ಕೂಡ ಗಮನಿಸಬೇಕು. ಎಂದು